# ನೀವು ಕೇಳಿದಿರಿ?

ವ. ಉಮೇಶ್ ಕಾರಂತ, ಮಂಗಳೂರು

*ಹಗಲು, ಇರುಳನ್ನು ಬೆಸೆದ ಬಾಂಧವ್ಯ ಯಾವುದು?*



ಭುವಿಯೇ. ಅವಳು ಒಂದೊಂದು 'ದಿನ' ಕೊಳ್ಳಲು ಶಾಪಿಂಗ್ ಹೊರಟಾಗಲೂ ರವಿಶಶಿಯರು ಅವಳ ಹಿಂದೆಹಿಂದೆ.

ವಿ. ಹಮೀದ್, ವಿಟ್ಲ

*ಲವ್ವಿನ ವೆಹಿಕಲ್ ಪಂಕ್ಚರ್ ಆದಾಗ ಮುಂದುವರಿಯುವ ಬಗೆ ಹೇಗೆ?*

ಭಿನ್ನತೆಯ ಮೊಳೆ ಕಿತ್ತು, ನಂಬಿಕೆಯ ಪ್ಯಾಚ್ ಮೆತ್ತಿ, ನಲ್ನುಡಿಯ ಗಾಳಿ ತುಂಬಿದರೆ ಲವ್ ವೆಹಿಕಲ್ ರೆಡಿ!

ಕಾಳೀಹುಂಡಿ ಕೆ.ವಿ. ಶಿವಕುಮಾರ್, ಮೈಸೂರು

*ಬಂದ ಪ್ರಶಸ್ತಿ, ಪದಕಗಳನ್ನು ಕದಿಯುವ ಮಂದಿ ಹೆಚ್ಚಾಗಿದ್ದಾರಲ್ಲಾ....?*

ಅದೇನು ಮಹಾ ಬಿಡಿ. ಪ್ರಶಸ್ತಿ, ಪದಕಗಳನ್ನು ಕಳ್ಳದಾರಿಯಲ್ಲಿ ಪಡೆಯುವವರು ಅದಕ್ಕಿಂತ ಹೆಚ್ಚಾಗಿದ್ದಾರೆ.

ವೈ.ಎನ್. ಸುಂದರೇಶನ್, ಮೈಸೂರು

*ಪೆದ್ದ ಹುಡುಗ ಚೂಟಿ ಹುಡುಗಿಯನ್ನು ಮದುವೆಯಾದರೆ ಏನಾಗಬಹುದು ರಾಮ್?*



ಏನೂ ವ್ಯತ್ಯಾಸವಾಗದು. ಎಲ್ಲ ಗಂಡುಗಳೂ ಹೆಂಡತಿಯಿಂದ 'ಇವರಿಗೇನೂ ಗೊತ್ತಾಗಲ್ಲ' ಎನಿಸಿಕೊಳ್ಳುವ ಪೆದ್ದುಗಳೇ.

ವಿ. ಹೇಮಂತಕುಮಾರ್, ಬೆಂಗಳೂರು

*ಹುಡುಗಿಯರ ಕೆನ್ನೆ ಕೆಂಪೇರುವುದು ಯಾವಾಗ?*

ಈಗಿನ ದಿನಗಳಲ್ಲಿ– ಥ್ರೆಡಿಂಗ್ ಮಾಡಿಸಿಕೊಂಡಿದ್ದು ಅಲರ್ಜಿಯಾದಾಗ.

ಪೇಂಟರ್ ಪಾಪು, ಸಂತೇಮರಹಳ್ಳಿ

*ಪೋಷಿಸಿದರೆ ಸಸಿ ಎತ್ತರಕ್ಕೆ ಬೆಳೆಯುತ್ತದೆ. ಪೋಷಿಸುವವರೇ ಇಲ್ಲದಿದ್ದಾಗ...?*

ಕಾಡುಗಿಡಗಳಿಗೆ ಪೋಷಣೆ ಇರುವುದಿಲ್ಲ. ಅಂತಃಸತ್ವ ಇರುವರಿಗೆ ಶೋಷಣೆಯೂ ಅಪರೋಕ್ಷ ಪೋಷಣೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಬಲಗೈಲಿ ಮಾಡಿದ್ದು ಎಡಗೈಗೆ ಗೊತ್ತಾಗಬಾರದು ಅಂತಾರಲ್ಲ, ಏನದು?*

ಬೈಕ್ ಓಡಿಸುವಾಗ ಆಕ್ಸಿಲರೇಟರ್ ಕೊಡುವುದು; ಎಡಗೈಯೂ ಅದೇ ಮಾಡುವೆನೆಂದರೆ ಬ್ಯಾಲೆನ್ಸ್ ತಪ್ಪುವುದು ಖಚಿತ.

ಸಾವಿತ್ರಮ್ಮ ವಿಭೂತಿ, ಹರಿಹರ

*ಯುವಜನಾಂಗದ ಉಗುಳು ಸಂಸ್ಕೃತಿಗೆ ಕಡಿವಾಣ ಹಾಕಲು ಶಿಕ್ಷಣದಿಂದ ಸಾಧ್ಯವಿಲ್ಲವೆ?*

ಊಹೂಂ. ತಲೆಗೆ ಹೆಲ್ಮೆಟ್ ಕಡ್ಡಾಯ ಮಾಡಿದಂತೆ ಮೂತಿಗೆ 'ಉಗುಳ್ಬುಟ್ಟಿ' ಕಡ್ಡಾಯ ಮಾಡುವುದೊಂದೇ ಮಾರ್ಗ.

ಅಮರಯ್ಯ ಪತ್ರಿಮಠ, ಶೋರಾಪುರ

*ಇಂದೂ ಸಹ ನಿಂದಕರನ್ನು ಬಂಧುಗಳು ಎನ್ನಬಹುದೆ?*

ಕೊಂಚವೇ ವ್ಯತ್ಯಾಸ; 'ನಿಂದಕರಿಂದ ಬಂದ್‌ಗಳು' ಎಂದು ಬದಲಾಯಿಸಿಕೊಳ್ಳಿ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

*ಆಸ್ಕರ್ ಪ್ರಶಸ್ತಿ ಏಕೆ ಭಾರತೀಯ ಚಿತ್ರಗಳಿಗೆ ಸಿಗುತ್ತಿಲ್ಲ?*

ಆ ಮಂಕರು ಜಾತಿ, ವಶೀಲಿಗಳಿಗೆ ಬಾಗದೆ ಇನ್ನೂ ಕೇವಲ ಅರ್ಹತೆಗೇ ಪ್ರಶಸ್ತಿ ಕೊಡುತ್ತಿದ್ದಾರಂತೆ.

ಎನ್.ವಿ. ಶ್ರೀನಿವಾಸ್, ಮೈಸೂರು

*ಕಳ್ಳರು ತಪ್ಪಿಸಿಕೊಂಡು ತಿರುಪತಿಗೆ ಹೋಗಿ ತಲೆ ಬೋಳಿಸಿಕೊಂಡರೆ ಪೊಲೀಸಿನವರು ಹೇಗೆ ಪತ್ತೆ ಹಚ್ಚುತ್ತಾರೆ?*

ಕಳ್ಳರ ಚಪ್ಪಲಿ ತಿಳಿದಿರುತ್ತದಲ್ಲ, ಅದನ್ನು ಪಡೆಯಲು ಕಳ್ಳರು ಸ್ಟ್ಯಾಂಡಿಗೆ ಹಿಂತಿರುಗಿದಾಗ ಹಿಡಿಯುತ್ತಾರೆ.

ಬಿ. ಚಂದ್ರೇಗೌಡ, ಬೆಂಗಳೂರು

*ಯಾವುದೇ ನಿರ್ಧಾರವು ಯೋಚನೆಯ ಮೇಲೆಯೇ ಅವಲಂಬಿತವಾಗುವುದು ಕಡ್ಡಾಯವೆ?*

ಹ್ಞ. ಸೆರಗಿಗೆ ಬೆಂಕಿ ಬಿದ್ದಾಗ ಯೋಚಿಸಿ ನಿರ್ಧರಿಸುವೆನೆಂದರೆ ಲೋಕಪಾವನಿಗೆ ಮಡಕೆಯಲ್ಲಿ ಪಯಣ ಖಚಿತ.

## ಬಹುಮಾನಿತ ಪ್ರಶ್ನೆ

ಎಚ್.ಆರ್. ದೇಸಾಯಿ, ರಾಯಚೂರು

*ಮುಪ್ಪಿನ ಕಾಲದಲ್ಲಿ ನಮ್ಮ ಕೈ ಹಿಡಿಯುವುದು ಹಣವೋ, ಹೆಂಡತಿಯೋ, ಮಗನೋ?*

ಇವರಾರೂ ಅಲ್ಲ. ಪಲ್ಸ್(ರ್ಸ್) ನೋಡುವ ಡಾಕ್ಟರ್, ಬಿಪಿ ನೋಡುವ ನರ್ಸ್.

ಹಾಡ್ಯ ಬ. ಜಯಾನಂದ, ಮೈಸೂರು

*ನಗು ಮನುಷ್ಯಕುಲದ ಶಕ್ತಿಯುತ ಆಯುಧ ಎಂದರೊಬ್ಬ ಇಂಗ್ಲಿಷ್ ಕವಿ. ಅಳು?*

ಸೀರಿಯಲ್ ಕುಲಕ್ಕೆ ಪ್ರಬಲವಾದ ಆದಾಯ.

ಫಾಲನೇತ್ರ ಸಜ್ಜನ, ಶಿರಸಿ

*ಜ್ಞಾನಪೀಠದತ್ತ ನೀವು ಎಷ್ಟು ಮೆಟ್ಟಿಲುಗಳನ್ನು ಹತ್ತಿದ್ದೀರಿ?*

ಹುಚ್ಚಪ್ಪ; ಕಡೆಯ ಕೆಲವು ಪ್ರಶಸ್ತಿಗಳ ನಂತರ ಅದು ಹತ್ತುವುದಲ್ಲ, ಇಳಿಯುವುದು.

ನರಸಿಂಹ ಪೈ, ಕಾಸರಕೋಡ

*ವ್ಯಕ್ತಿಗಿಂತ ವ್ಯಕ್ತಿತ್ವಕ್ಕೆ ಹೆಚ್ಚು ಬೆಲೆ. ಏಕೆ?*



ಮೇಕಿಂಗ್ ಚಾರ್ಜ್ ಸೇರುತ್ತದಲ್ಲ! ವ್ಯಕ್ತಿ ಚಿನ್ನ, ವ್ಯಕ್ತಿತ್ವ ಆಭರಣ.

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

*ರಾಮಾಯಣದ ಸುಗ್ರೀವನ ಆಜ್ಞೆಯನ್ನು ಇಂದಿಗೂ ನಮ್ಮ ರಾಜಕಾರಣಿಗಳು ಬಳಸುವುದೇಕೆ?*

ಅಂದಿನ ವಾನರ ಬುದ್ಧಿಯೇ ಕಂಟಿನ್ಯೂ ಆಗಿರುವುದರಿಂದ.

ಶಾಂತಾ ಡಿ. ಗೌಡ, ಬೆಂಗಳೂರು

*'ಬಂದದ್ದೆಲ್ಲ ಬರಲಿ, ಗೋವಿಂದನ ದಯೆ ಇರಲಿ' ಎಂದುಕೊಂಡು ಬದುಕಲು ನಮಗೇಕೆ ಸಾಧ್ಯವಾಗುವುದಿಲ್ಲ?*

ಬಿಡ್ತು ಅನ್ನಿ; 'ಗೋವಿನ್', 'ದನ' ಎಂದಾಕ್ಷಣ ಗೋರಕ್ಷಕ–ಗೋಭಕ್ಷಕ ಸಂಘರ್ಷದಲ್ಲಿ ಸಿಲುಕಿ ಒದ್ದಾಡುವುದೂ ಒಂದು ಬದುಕೆ?

■ ರಾಮ್